**ಚಾಸಾಃ 1 ಪ್ರಾಸಾಃ 1**

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ

**ಸಿಸಿ ಸಂಖ್ಯೆ**: 779/2024

| | |
|---|---|
| ಹೆಸರು | : ಚೇತನ್ |
| ತಂದೆಯ ಹೆಸರು | : ಪದ್ಮನಾಭ |
| ಪ್ರಾಯ | : 33 ವರ್ಷ |
| ಉದ್ಯೋಗ | : ಖಾಸಗಿ ಕೆಲಸ |
| ವಾಸ | : ಉಜಿರೆ, ಬೆಳ್ತಂಗಡಿ ತಾಲೂಕು |

**ದಿನಾಂಕ 12.11.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ

ದಿಃ 30.12.2023 ರಂದು ನಾನು ನಮ್ಮ ತೋಟಕ್ಕೆ ನೀರು ಬಿಡಲು ಹೋಗುತ್ತಿದ್ದಾಗ ಬೆಳಿಗ್ಗೆ 7.30 ಗಂಟೆಯಾಗಿತ್ತು. ಆ ಸಮಯದಲ್ಲಿ ವಿಜಯ ಗೌಡ, ರಮೇಶ್ ಗೌಡ, ಅಣ್ಣಿ ಗೌಡ, ಪ್ರದೀಪ್, ಭವ್ಯ, ಪವಿತ್ರ, ಮೀನಾಕ್ಷಿ, ಪೂರ್ಣಿಮಾ ಎಂಬುವವರು ದೊಣ್ಣೆಯಿಂದ ತೆಗೆದುಕೊಂಡು ನನ್ನ ತೋಟಕ್ಕೆ ಅಕ್ರಮವಾಗಿ ಪ್ರವೇಶ ಮಾಡಿ ಅಣ್ಣಿ ಗೌಡ ಮೆಣಸಿನ ಹುಡಿಯನ್ನು ನನ್ನ ಕಣ್ಣಿಗೆ ಹಾಕಿ ಕತ್ತಿಯನ್ನು ಕೈಯಲ್ಲಿ ಹಿಡಿದು ಅವಾಚ್ಯವಾಗಿ ಬೇವರ್ಸಿ ರಂಡೆ ಮಗ, ನಿನ್ನನ್ನು ಇವತ್ತು ಕೊಲ್ಲದೆ ಬಿಡುವುದಿಲ್ಲ ಎಂದು ಕಣ್ಣಿಗೆ ಮೆಣಸಿನ ಹುಡಿಯನ್ನು ಹಾಕಿರುತ್ತಾರೆ. ರಮೇಶ್ ಗೌಡ ರವರು ನನ್ನ ತಲೆಯ ಎಡಬದಿಗೆ ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ. ಆಗ ನನ್ನ ಎಡಬದಿಯ ತಲೆಗೆ ರಕ್ತಗಾಯವಾಗಿರುತ್ತದೆ. ವಿಜಯ ಗೌಡ ದೊಣ್ಣೆಯಿಂದ ನನ್ನ ಎಡಗೈಗೆ ಹಲ್ಲೆ ಮಾಡಿರುತ್ತಾರೆ. ಇದರಿಂದ ಬಾಸುಂಡೆ ಉಂಟಾಗಿರುತ್ತದೆ. ಆಗ ನಾನು ಕೆಳಗೆ ಬಿದ್ದಿರುತ್ತೇನೆ. ಕೆಳಗೆ ಬಿದ್ದು ಬೊಬ್ಬೆ ಹಾಕಿದಾಗ ಉಳಿದವರು ಕಾಲಿನಿಂದ ನನಗೆ ತುಳಿದಿರುತ್ತಾರೆ. ನಾನು ಬೊಬ್ಬೆ ಹಾಕಿದಾಗ ನೆರೆಕೆರೆಯ ಸಂಬಂಧಿಕರಾದ ಗಣೇಶ್ ಗೌಡ, ಸದಾಶಿವ, ರಾಜೇಶ, ಹರೀಶ, ಶ್ರೀಧರ, ನನ್ನ ತಾಯಿ ವೀಣಾ ರವರು

ಸ್ಥಳಕ್ಕೆ ಬಂದು ಅವರ ಕೈಯಲ್ಲಿದ್ದ ಕತ್ತಿ ದೊಣ್ಣೆಗಳನ್ನು ಅಲ್ಲೆ ಬಿಟ್ಟು ಓಡಿಹೋಗಿರುತ್ತಾರೆ. ಸದಾಶಿವ ಎಂಬುವವರು ಆಟೋ ರಿಕ್ಷಾದಲ್ಲಿ ನನ್ನನ್ನು ಬೆನಕ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಬೆನಕ ಆಸ್ಪತ್ರೆಗೆ ದಾಖಲು ಮಾಡಿಕೊಂಡು ನನಗೆ ಚಿಕಿತ್ಸೆ ನೀಡಿರುತ್ತಾರೆ. ನಂತರ ಬೆನಕ ಆಸ್ಪತ್ರೆಗೆ ಪೊಲೀಸರು ಬಂದು ನನ್ನ ಹೇಳಿಕೆ ದೂರನ್ನು ಪಡೆದಿರುತ್ತಾರೆ. ಹೇಳಿಕೆ ದೂರಿನಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಹೇಳಿಕೆ ದೂರನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು. ದಿಃ 4.1.2024 ರಂದು ಮಧ್ಯಾಹ್ನ 1 ರಿಂದ 2 ಗಂಟೆಯವರೆಗೆ ನಾನು ತೋರಿಸಿಕೊಟ್ಟ ಸ್ಥಳದಲ್ಲಿ ಉಮೇಶ್ ಮತ್ತು ಕುಮಾರ್ ರವರ ಸಮಕ್ಷಮದಲ್ಲಿ ಸ್ಥಳ ಮಹಜರ್ ತಯಾರಿಸಿರುತ್ತಾರೆ. ಆ ಸಮಯದಲ್ಲಿ ಸ್ಥಳದಲ್ಲಿದ್ದ ಕತ್ತಿ ಮತ್ತು ದೊಣ್ಣೆಗಳನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಮಹಜರ್ ನಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಮಹಜರ್ ನ್ನು ನಿಪಿ-2 ಎಂದು ಸಾಕ್ಷಿ ಸಹಿಗಳನ್ನು ನಿಪಿ2(ಎ),(ಬಿ) ಎಂದು ಗುರುತಿಸಲಾಯಿತು. ಅಲ್ಲದೆ ಆ ಸಮಯದಲ್ಲಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಗೆ ಪೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ತಾವು ಇರುವುದಾಗಿ ನೋಡಿ ಗುರುತಿಸಿದ ಮೇರೆಗೆ ಸದರಿ ಪೋಟೋಗಳನ್ನು ನಿಪಿ-3 ರಿಂದ 5 ಎಂದು, ಸಿ.ಡಿ ಯನ್ನು ನಿಪಿ-6 ಎಂದು ಗುರುತಿಸಲಾಯಿತು. ಆರೋಪಿತರನ್ನು ಹಾಗೂ ಸ್ವಾಧೀನಪಡಿಸಿಕೊಂಡ ಸ್ವತ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ವಿಜಯ ಗೌಡ, ರಮೇಶ್ ಗೌಡ, ಪವಿತ್ರ, ಮೀನ ಎಂಬ ಆರೋಪಿತರನ್ನು ನೋಡಿ ಗುರುತಿಸಿದ್ದು, ಉಳಿದ ಆರೋಪಿತರು ಖುದ್ದು ವಿನಾಯಿತಿಗೆ ಅರ್ಜಿ ಸಲ್ಲಿಸಿರುವುದರಿಂದ ಆರೋಪಿತರನ್ನು ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ಸ್ವಾಧೀನಪಡಿಸಿಕೊಂಡ ಎರಡು ದೊಣ್ಣೆ ಹಾಗೂ ಕತ್ತಿಯನ್ನು ನೋಡಿ ಗುರುತಿಸಿದ್ದು, ಎರಡು ದೊಣ್ಣೆಗಳನ್ನು ಕ್ರಮವಾಗಿ ಮು.ಮಾ1 ಎಂದು ಸಾಕ್ಷಿ ಸಹಿಯನ್ನು ಮು.ಮಾ1(ಎ) ಎಂದು, ಮತ್ತು ಇನ್ನೊಂದು ದೊಣ್ಣೆಯನ್ನು ಮು.ಮಾ2 ಎಂದು, ಸಾಕ್ಷಿ ಸಹಿಯನ್ನು ಮು.ಮಾ2(ಎ) ಎಂದು, ಕತ್ತಿಯನ್ನು ಮು.ಮಾ3 ಎಂದು ಸಾಕ್ಷಿ ಸಹಿಯನ್ನು ಮು.ಮಾ3(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ರಿಂದ 7ನೇ ಆರೋಪಿತರ ಪರ ಶ್ರೀ. ಎ.ಎಸ್.ಕೆ ವಕೀಲರಿಂದಃ**

ನಮ್ಮ ಮತ್ತು ಆರೋಪಿತರ ನಡುವೆ ಜಾಗಕ್ಕೆ ಸಂಬಂಧಪಟ್ಟ ವಿವಾದ ಸುಮಾರು 10 ವರ್ಷಗಳಿಂದ ಇರುತ್ತದೆ. ಅದಕ್ಕೆ ಸಂಬಂಧಪಟ್ಟಂತೆ ಸಿವಿಲ್ ವ್ಯಾಜ್ಯಗಳು ಸಹ ಇದ್ದಾವೆ ಎಂದರೆ ಹೌದು. ಈ ಘಟನೆಯ ಸಮಯದಲ್ಲಿ ನಾನು ಮತ್ತು ಇತರರು ಆರೋಪಿತರಿಗೆ ಹಲ್ಲೆ ಮಾಡಿದ್ದೇವೆ ಎಂದು ನಮ್ಮ

ಮೇಲೆ ಸಹ ಪ್ರಕರಣ ದಾಖಲಾಗಿದೆ ಎಂದರೆ ಹೌದು, ಆದರೆ ಸುಳ್ಳು ಪ್ರಕರಣ ದಾಖಲಿಸಿದ್ದಾರೆ. ಸಾಕ್ಷಿ ಮುಂದುವರಿದು ನಾವೆ ಮೊದಲು ದೂರು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಗಲಾಟೆ ನಡೆಯಿತು ಎಂದು ಹೇಳುವ ಜಾಗದ ಆರ್.ಟಿ.ಸಿ ಯಾರ ಹೆಸರಿನಲ್ಲಿದೆ ಎಂದರೆ ನನ್ನ ಹೆಸರಿನಲ್ಲಿರುತ್ತದೆ. ಆರೋಪಿತರು ಬರುವಾಗ ನಾನು ಒಬ್ಬನೆ ಇದ್ದೆ. ಎಷ್ಟು ಜನ ಆರೋಪಿತರು ಆ ಸಮಯದಲ್ಲಿ ಬಂದಿದ್ದಾರೆ ಎಂದರೆ ಸಾಕ್ಷಿ 8 ರಿಂದ 9 ಜನ ಬಂದಿದ್ದಾರೆ, ಅವರಲ್ಲಿ ಎಲ್ಲರೂ ಪರಿಚಯಸ್ಥರು. ಆಸ್ಪತ್ರೆಗೆ ಹೋದಾಗ ಯಾರು ಹಲ್ಲೆ ಮಾಡಿದ್ದಾರೆ ಎಂಬುವವರ ಹೆಸರನ್ನು ವೈದ್ಯರ ಹತ್ತಿರ ಹೇಳಿದ್ದೀರಾ ಎಂದರೆ ಹೌದು. ಅವರು ಅವುಗಳನ್ನು ಬರೆದುಕೊಂಡಿದ್ದಾರಾ ಎಂದರೆ ಸಾಕ್ಷಿ ಸಮಯವನ್ನು ಬರೆದಿದ್ದಾರೆ, ಹೆಸರು ಬರೆದಿದ್ದಾರೋ ಇಲ್ಲವೋ ನೆನಪಿಲ್ಲ ಎಂದು ಹೇಳುತ್ತಾರೆ. ಅವರ ಪೈಕಿ ಯಾರ ಕೈಯಲ್ಲಿ ದೊಣ್ಣೆ ಇತ್ತು ಎಂದರೆ ಸಾಕ್ಷಿ ವಿಜಯ ಗೌಡ ಮತ್ತು ರಮೇಶ್ ಗೌಡ ರವರ ಕೈಯಲ್ಲಿತ್ತು ಎಂದು ಹೇಳುತ್ತಾರೆ. ಅವರ ಕೈಯಲ್ಲಿ ದೊಣ್ಣೆ ಬಿಟ್ಟು ಬೇರೆ ಏನು ಇರಲಿಲ್ಲ. ಮೆಣಸಿನ ಹುಡಿ ಅಣ್ಣಿ ಗೌಡ ರವರ ಕೈಯಲ್ಲಿತ್ತು. ಅದನ್ನು ಯಾವುದರಲ್ಲಿ ಇಟ್ಟುಕೊಂಡಿದ್ದರು ಎಂದರೆ ಸಾಕ್ಷಿ ತೊಟ್ಟೆಯಲ್ಲಿ ಇಟ್ಟುಕೊಂಡಿದ್ದರು ಎಂದು ಹೇಳುತ್ತಾರೆ. ಆ ತೊಟ್ಟೆ ನಂತರ ಏನಾಗಿದೆ ಎಂದು ಹೇಳಬಹುದಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಕತ್ತಿಯು ಅಣ್ಣಿ ಗೌಡ ಒಬ್ಬರ ಮಾತ್ರ ಇತ್ತು. ಕತ್ತಿ ಮತ್ತು ದೊಣ್ಣೆಗಳನ್ನು ಅಲ್ಲೆ ಬಿಸಾಡಿ ಹೋಗಿದ್ದರು.

2. ನಿಮಗೆ ದೊಣ್ಣೆಯಿಂದ ಎಲ್ಲಿಗೆ ಹಲ್ಲೆ ಮಾಡಿದ್ದಾರೆ ಎಂದರೆ ರಮೇಶ್ ಗೌಡ ನನ್ನ ತಲೆಯ ಎಡಬದಿಗೆ ಹಲ್ಲೆ ಮಾಡಿದ್ದಾರೆ. ವಿಜಯ ಗೌಡ ಎಡಭುಜಕ್ಕೆ ಹಲ್ಲೆ ಮಾಡಿದ್ದಾರೆ. ಅಣ್ಣಿ ಗೌಡ ಮೆಣಸಿನ ಹುಡಿ ಹಾಕಿದ್ದಾರೆ. ಭವ್ಯ, ಪವಿತ್ರ, ಜ್ಯೋತಿ, ಮೀನಾಕ್ಷಿ, ಪ್ರದೀಪ್ ನಾನು ಕೆಳಗೆ ಬಿದ್ದಾಗ ಕಾಲಿನಿಂದ ತುಳಿದಿರುತ್ತಾರೆ. ಆ ರೀತಿ ಹಲ್ಲೆ ಮಾಡಿದ ಕಾರಣ ರಕ್ತ ಬರುವ ಗಾಯ ಆಗಿದೆಯಾ ಎಂದರೆ ಹೌದು. ತಲೆಯ ಎಡಬದಿಗೆ ರಕ್ತ ಬರುವ ಗಾಯವಾಗಿತ್ತು. ಭುಜದಲ್ಲಿ ರಕ್ತ ಬರುವ ಗಾಯ ಆಗಿರಲಿಲ್ಲ ಆದರೆ ಊತ ಬಂದಿತ್ತು. ಪೊಲೀಸರು ಆಸ್ಪತ್ರೆಗೆ ಬಂದಾಗ ಹೆಸರುಗಳನ್ನು ತಪ್ಪಿ ಹೇಳಿದ್ದೀರಾ ಎಂದರೆ ಸಾಕ್ಷಿ ಪೂರ್ಣಿಮಾ ಎಂಬುವವರು ಸಹ ನನಗೆ confusion ಇತ್ತು, ಅವರ ಹೆಸರು ಜ್ಯೋತಿ ಎಂದು ಹೇಳುತ್ತಾರೆ. ತುಳಿದಾಗ ಎಲ್ಲಿಗೆ ಗಾಯವಾಗಿದೆ ಎಂದರೆ ಸಾಕ್ಷಿ ಎರಡು ಕಾಲುಗಳಿಗೆ ಊತ ಆಗಿರುತ್ತದೆ. ಕಣ್ಣಿಗೆ ಮೆಣಸಿನ ಹುಡಿ ಹಾಕಿದ್ದ ಕಾರಣ ಕಣ್ಣಿಗೆ ಯಾವುದಾದರೂ ತೊಂದರೆಯಾಗಿತ್ತಾ ಎಂದರೆ ಸಾಕ್ಷಿ ವೈದ್ಯರ ಹತ್ತಿರ ಹೋದಾಗ ಕಣ್ಣಿನ ಭಾಗದಲ್ಲಿ ಮೆಣಸಿನ ಹುಡಿ ಇತ್ತು. ಆ ಸಮಯದಲ್ಲಿ ಕಣ್ಣು ಕೆಂಪಾಗಿತ್ತಾ ಎಂದರೆ ಹೌದು.

3. ನಾನು ಆಸ್ಪತ್ರೆಯಲ್ಲಿ ಒಂದು ದಿನ ದಾಖಲಾಗಿದ್ದೆ. ಆಸ್ಪತ್ರೆಯಿಂದ ಯಾವಾಗ ಮನೆಗೆ ಬಂದಿದ್ದೀರಿ ಎಂದರೆ ಸಾಕ್ಷಿ ಅದೇ ದಿನ ಸಂಜೆ ಬಂದಿದ್ದೇನೆ ಎಂದು ಹೇಳುತ್ತಾರೆ. ಮಹಜರ್ ನ್ನು ದಿಃ 4.1.2024 ರಂದು ಮಾಡಿರುತ್ತಾರೆ. ಆ ದಿನ ಸಾಕ್ಷಿದಾರರನ್ನು ಯಾರು ಬರಲು ಹೇಳಿದ್ದರು ಎಂದರೆ ಪೊಲೀಸರು ಹೇಳಿದ್ದರು. ಎಲ್ಲಿಂದ ಬರಲು ಹೇಳಿದ್ದರು ಎಂದರೆ ಸಾಕ್ಷಿ ನೆರೆಕೆರೆಯ ಮನೆಯಲ್ಲಿ ಕೆಲಸ ಮಾಡುತ್ತಿದ್ದವರನ್ನು ಬರಲು ಹೇಳಿದ್ದರು ಎಂದು ಹೇಳುತ್ತಾರೆ. ಘಟನೆ ನಡೆಯಿತು ಎಂದು ಹೇಳುವ ಜಾಗ ಅಡಿಕೆ ತೋಟ. ಅಲ್ಲಿ ಮು.ಮಾ1 ಮತ್ತು 2 ರ ರೀತಿಯ ದೊಣ್ಣೆಗಳು ಬಿದ್ದಿರುತ್ತವೆ ಎಂದರೆ ಇಲ್ಲ.

4. ನಾನು ಹೇಳುವ ರೀತಿಯಲ್ಲಿ ಆರೋಪಿತರು ಯಾವತ್ತೂ ನಮ್ಮ ಜಾಗಕ್ಕೆ ಅಕ್ರಮವಾಗಿ ಪ್ರವೇಶ ಮಾಡಿಲ್ಲ ಮತ್ತು ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಅದೆ ದಿನ ನಿಜವಾಗಿ ಅವರ ಪರವಾಗಿ ತಡೆಯಾಜ್ಞೆ ಸಿಕ್ಕಿದ ಜಾಗಕ್ಕೆ ನಾವುಗಳು ಅಕ್ರಮವಾಗಿ ಪ್ರವೇಶ ಮಾಡಿ ಅವರಿಗೆ ಹಲ್ಲೆ ಮಾಡಿದ್ದೇವೆ ಎಂದರೆ ಸುಳ್ಳು. ಅವರಿಗೆ ಹಲ್ಲೆ ಮಾಡುವಾಗ ನನ್ನ ಮೈ ಮೇಲೆ ಆದ ಸಣ್ಣ ಪುಟ್ಟ ಗಾಯಗಳನ್ನು ದುರುಪಯೋಗಪಡಿಸಿಕೊಂಡು ಆರೋಪಿತರು ಹಲ್ಲೆ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಮಹಜರ್ ನ್ನು ಯಾರು ಬರೆದಿದ್ದಾರೆ ಎಂದರೆ ಪೊಲೀಸರು ಕೈಬರಹದಲ್ಲಿ ಬರೆದಿದ್ದಾರೆ. ಸಾಕ್ಷಿ ಮುಂದುವರಿದು ಲಾಪ್‌ಟಾಪ್ ನ್ನು ಹಿಡಿದುಕೊಂಡು ಬಂದಿದ್ದರು ಎಂದು ಹೇಳುತ್ತಾರೆ. ಲಾಪ್‌ಟಾಪ್ ನಲ್ಲಿ ಟೈಪ್ ಮಾಡಿ ಪ್ರಿಂಟ್‌ನ್ನು ಎಲ್ಲಿ ತೆಗೆದಿದ್ದಾರೆ ಎಂದರೆ ಸ್ಟೇಷನ್‌ನಲ್ಲಿ ತೆಗೆದಿದ್ದಾರೆ. ಹಾಗೆ ಪ್ರಿಂಟ್ ತೆಗೆದ ನಂತರ ನೀವು ಮತ್ತು ಸಾಕ್ಷಿದಾರರು ಸಹಿ ಮಾಡಿದ್ದೀರಿ ಎಂದರೆ ಹೌದು. ಪೊಲೀಸರು ಸ್ಥಳದಲ್ಲಿ ಯಾವುದೇ ಮಹಜರ್ ನ್ನು ತಯಾರಿಸಿರುವುದಿಲ್ಲ. ನಾನು ಸಾಕ್ಷಿದಾರರನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ದಾಖಲೆಗೆ ಸಹಿ ಮಾಡಿಸಿದ್ದು ಪೊಲೀಸರು ಮಹಜರ್ ನ್ನು ಪೊಲೀಸ್ ಠಾಣೆಯಲ್ಲಿ ತಯಾರಿಸಿದ್ದಾರೆ ಎಂದರೆ ಸಾಕ್ಷಿ ಘಟನಾ ಸ್ಥಳಕ್ಕೆ ಬಂದಿರುವುದಕ್ಕೆ ಫೋಟೋ ಸಾಕ್ಷಿ ಇದೆ ಎಂದು ಹೇಳುತ್ತಾರೆ. ನಾವೆ ಹಲ್ಲೆ ಮಾಡಿದ ಕಾರಣ ಯಾರ ಹೆಸರನ್ನು ಕೊಡಬೇಕು ಎಂಬುದು ಗೊತ್ತಿಲ್ಲದೆ ವೈದ್ಯರ ಹತ್ತಿರ ಯಾವುದೇ ಹೆಸರನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿ ವೈದ್ಯರು ಕೇಳಿರುವುದಿಲ್ಲ, ಇನ್ಸ್ ಪೆಕ್ಟರ್ ಬಂದಿದ್ದರು ಅವರ ಹತ್ತಿರ ಹೇಳಿದ್ದೇನೆ ಎಂದು ಹೇಳುತ್ತಾರೆ. ನಂತರ ನೀವು ಮತ್ತು ಇತರರು ಸೇರಿ ಯಾರ ಹೆಸರನ್ನು ಕೊಡಬೇಕು ಎಂಬುದನ್ನು ತೀರ್ಮಾನಿಸಿ ಪೊಲೀಸರು ಬಂದಾಗ ಆ ಹೆಸರುಗಳನ್ನು ನೀಡಿದ್ದೇವೆ ಎಂದರೆ ಸಾಕ್ಷಿ ನಾನೆ ಹೇಳಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಹಾಗಾಗಿ ಹೇಳಿಕೆ ಕೊಡುವಾಗ ಕೆಲವು ಹೆಸರುಗಳನ್ನು ತಪ್ಪಿ ಕೊಟ್ಟಿದ್ದೇನೆ ಎಂದರೆ ಸಾಕ್ಷಿ ಸರಿ ಕೊಟ್ಟಿದ್ದೇನೆ, ಒಂದು ಹೆಸರು ಮಾತ್ರ ನೆನಪಿರಲಿಲ್ಲ, ಅವರಿಗೆ ಎರಡು ಹೆಸರಿತ್ತು ಎಂದು ಹೇಳುತ್ತಾರೆ. ಆ

ನಂತರ ಅವರ ಸರಿಯಾದ ಹೆಸರುಗಳನ್ನು ತಿಳಿದುಕೊಂಡು ಈಗ ಹೊಸ ಹೆಸರುಗಳನ್ನು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಸರಿಯಾದ ಹೆಸರನ್ನೆ ಹೇಳಿದ್ದೇನೆ ಎಂದು ಹೇಳುತ್ತಾರೆ. ನಾವೆ ಹಲ್ಲೆ ಮಾಡಿ ನಮ್ಮ ಮೇಲೆ ಹಲ್ಲೆಯಾಗಿದೆ ಎಂದು ಕತೆ ಕಟ್ಟಿ ಅದಕ್ಕೆ ಪೂರಕವಾಗಿ ಈಗ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)